ಪ್ರಧಾನ ದಿವಾಣಿ & ಜೆ.ಎಮ್.ಎಫ್.ಸಿ. ನ್ಯಾಯಾಲಯ, ಜಮಖಂಡಿ
ಇವರ ನ್ಯಾಯಾಲಯದಲ್ಲಿ,

ಸಿ.ಸಿ.ನಂ.1480/2022
ಸಿ.ಡಬ್ಲ್ಯೂ-1 ಪಿ.ಡಬ್ಲ್ಯೂ-1

| | | |
|---|---|---|
| ಸಾಕ್ಷಿದಾರರ ಹೆಸರು | : | ಸಚೀನ ವಿಜಯಕುಮಾರ ಅಲಮೇಲಕರ್ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಪಿ ಎಸ್ ಐ ಹುಬ್ಬಳ್ಳಿ ಗ್ರಾಮೀನ ಪೊಲೀಸ ಠಾಣೆ |
| ವಾಸಸ್ಥಳ | : | ಹುಬ್ಬಳ್ಳಿ |

ದಿನಾಂಕ: 21.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯವಿಚಾರಣೆ: ಶ್ರೀ. ಸ.ಸ.ಅ ರವರಿಂದ.

ದಿಃ 13-10-2021 ರಿಂದ 25-11-2022 ರವರೆಗೆ ಸಾವಳಗಿ ಪೊಲೀಸ ಠಾಣೆಯಲ್ಲಿ ಪಿ ಎಸ್ ಐ ಆಗಿ ಕಾರ್ಯನಿರ್ವಹಿಸಿರುತ್ತೇನೆ. ದಿಃ 23-07-2022 ರಂದು ನಾನು ಠಾಣೆಯಲ್ಲಿ ಇದ್ದಾಗ ಬೆಳಿಗ್ಗೆ 10-00 ಗಂಟೆಗೆ ಅಡಿಹುಡಿ ಗ್ರಾಮದಲ್ಲಿ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದಬಗ ್ಗೆ ಬಾತ್ಮಿ ಬಂತು. ನಂತರ ನಾನು ಚಾಸಾ-4 ರವರ ಮುಖಾಂತರ ಇಬ್ಬರು ಪಂಚರನ್ನು ಬರಮಾಡಿಕೊಂಡು ಅವರಿಗೆ ಬಾತ್ಮಿ ಬಗ್ಗೆ ಮಾಹಿತಿಕೊಟ್ಟು. ಅವರು ಪಂಚರಾಗಲು ಒಪ್ಪಿ ನಾವೆಲ್ಲರೂ ಸೇರಿ 10-20 ಕ್ಕೆ ಠಾಣೆಯನ್ನು ಬಿಟ್ಟು ಅಡಿಹುಡಿ ಗ್ರಾಮಕ್ಕೆ 10-50 ಕ್ಕೆ ತಲುಪಿ ಸದಾಶಿವ ಲೋಕಾಪುರ ಮನೆಯ ಹತ್ತಿರ ಮರೆಯಲ್ಲಿ ನಿಂತು ವಾಚ್ ಮಾಡಿ ನಿಂತು ನೋಡಲಾಗಿ ಆರೋಪಿ ಒಂದು ರಟ್ಟಿನ ಬಾಕ್ಸನ್ನು ಇಟ್ಟುಕೊಂಡು ಸಾರಾಯಿ ಮಾರಾಟ ಮಾಡುತ್ತಿದ್ದನು ಖಚಿತಪಡಿಸಿಕೊಂಡು ದಾಳಿ ಮಾಡಿ ಅಲ್ಲಿ ಸಾರಾಯಿ ಖರೀದಿಸುತ್ತಿದ್ದ ವ್ಯಕ್ತಿಗಳು ಓಡಿ ಹೋಗಿದ್ದು ಆರೋಪಿ ಸಿಕ್ಕುಬಿದ್ದು ಅವನ ಹೆಸರು ವಿಚಾರಿಸಲಾಗಿ ಅವನ ಹೆಸರು ಸದಾಶಿವ ತಂದೆ ರಾಮಪ್ಪ ಲೋಕಾಪುರ ಅಂತಾ ಉತ್ತರಿಸಿದ್ದು ಸದರಿ ರಟ್ಟಿನ ಬಾಕ್ಸನ್ನು ಪಂಚ ಸಮಕ್ಷಮ ಪರಿಶೀಲಿಸಿ ನೋಡಲಾಗಿ ಅದರಲ್ಲಿ 90 ಎಂ ಎಲ್ ನ ವಿಲ್ಲಿಂಗ್ಟನ್ ವಿಸ್ಕಿ 35 ಪೌಚಗಳು ಇದ್ದು, ಅದರ ವಿರುದ್ಧ ಆರೋಪಿ ಸಮರ್ಪಕ ಉತ್ತರ ನೀಡಿರುವುದಿಲ್ಲ ಮತ್ತು ಆತನ ಬಳಿ ಸಾರಾಯಿ ಮಾಡಲು ಪರವಾನಿಗೆ ಇಲ್ಲದ್ದನ್ನು ಖಚಿತಪಡಿಸಿಕೊಂಡು ಎಲ್ಲ ಸಾರಾಯಿ ಪೌಚಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಬೇರ್ಪಡಿಸಿ ವಿಧಿ ವಿಧಾನದಂತೆ ಸೀಲ್ ಮಾಡಿ ಚೀಟಿ ಅಂಟಿಸಿ ಪಂಚರ ನನ್ನ ಸಹಿ ಮಾಡಿ ಸದರಿ ಪಂಚನಾಮೆಯನ್ನು 11-00 ಗಂಟೆಯಿಂದ 12-00 ಗಂಟೆವರೆಗೆ ಮಾಡಿ ನಂತರ ಆರೋಪಿ ಹಾಗೂ ಮುದ್ದೆಮಾಲುಗಳನ್ನು ಠಾಣೆಗೆ ತಂದು ಆರೋಪಿ ವಿರುದ್ಧ ಅಬಕಾರಿ ಕಾಯ್ದೆ ಅಡಿ ಪ್ರಕರಣ ದಾಖಲಿಸಿರುತ್ತೇನೆ.

ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ನಿಪಿ-1 ಎಂದ ಸಾಕ್ಷಿ ಸಹಿಯನ್ನು ನೋಡಿ ನಿಪಿ-1 ಎ, ಪಿರ್ಯಾದಿಯನ್ನು ನೋಡಿ ಗುರುತಿಸಿದ್ದು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎ, ಸಾಕ್ಷಿ ಮಾದರಿ ಸಹಿ ಮತ್ತು ಸೀಲ್ ಗಳನ್ನು ನೋಡಿ ಗುರುತಿಸಿದ್ದು ನಿಪಿ-3 ಸಾಕ್ಷಿ ಸಹಿಗಳನ್ನು ನಿಪಿ-3 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಕಾಲವಕಾಶ ನೀಡಲಾಯಿತು.

[ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.]
ಓ.ಹೇ.ಕೇ.ಸರಿ ಇದೆ.

ಸಹಿ/-
C/c ಪ್ರಧಾನ ದಿವಾಣಿ ನ್ಯಾಯಾಧೀಶರು,
ಜಮಖಂಡಿ.